ಅಕ್ಷರ ಕೆ.ವಿ.

ಕಲೆ: ಯತಿ ಸಿದ್ಧಕಟ್ಟೆ

# ಮಾಯಾದರ್ಪಣ

ನಾಟಕಶಾಲೆಯ ವಿದ್ಯಾರ್ಥಿಗಳು ತಮ್ಮ ಕೇರಳ ಪ್ರವಾಸದ ಕಾಲದಲ್ಲಿ, ತೆಯ್ಯಮ್ ಉತ್ಸವ ನೋಡಲು ಹೋದಾಗಿನ ಅನುಭವಚಿತ್ರಗಳ ಈ ಬರಹ, ನಲವತ್ತು ವರ್ಷಗಳ ಹಿಂದಿನ ಕೇರಳದ ಊರೊಂದರಲ್ಲಿ ಇರುಳಿನಲ್ಲಿ ನಮ್ಮನ್ನು ಅಡ್ಡಾಡಿಸುತ್ತದೆ. ಕಥನ, ಪ್ರಬಂಧ, ಅನುಭವಚಿತ್ರ ಎಲ್ಲವುಗಳ ಕೊಲಾಜ್‌ನಂತಿರುವ ಈ ಬರಹ, ನಮ್ಮ ಈವರೆಗಿನ ಅನುಭವ ಕಟ್ಟಿಕೊಟ್ಟ ನಂಬಿಕೆ–ವಿಚಾರಗಳನ್ನು ರಮ್ಯವಾದ ಮಾಯಾದರ್ಪಣದಲ್ಲಿ ನೋಡಲು ಪ್ರೇರೇಪಿಸುತ್ತದೆ.

ಮಾಯಾದರ್ಪಣ ಎಂಬ ಶಬ್ದವು ನನ್ನೊಳಗೆ ಹುದುಗಿಸಿ ಇಟ್ಟಿದ್ದ ಕಥೆಯೊಂದನ್ನು ಹೇಳಹೊರಟಿದ್ದೇನೆ. ನಲವತ್ತು ವರ್ಷಗಳ ಹಿಂದಿನ ಈ ಕಥೆಯನ್ನು ಇದುವರೆಗೆ ನಾನು ಹೇಳಿಕೊಂಡಿಲ್ಲದೆ ಇದ್ದುದಕ್ಕೆ ಹಲವು ಕಾರಣಗಳಿವೆ. ಮೊದಲನೆಯದಾಗಿ, ಆ ಕಥೆಯ ಅನೇಕ ವಿವರಗಳೀಗ ನನಗೆ ನೆನಪಿಲ್ಲ; ಅಷ್ಟೇ ಸಾಲದೆಂಬಂತೆ, ಆಗಾಗ ಬರುವ ಆ ಕಥೆಯ ನೆನಪು, ಪ್ರತಿಬಾರಿಯೂ ಹೊಸ ಹೊಸ ವೇಷಧರಿಸಿ ಬರುತ್ತಿರುವುದರಿಂದ, ನಿಜವಾಗಿಯೂ ನಡೆದದ್ದು ಯಾವುದು, ಆಮೇಲೆ ನನ್ನ ಮನಸ್ಸು ಅದಕ್ಕೆ ಕೂಡಿಸಿದ್ದು ಯಾವುದು ಎಂಬುದು ಕೂಡಾ ತಿಳಿಯದೆ ಹಲವೊಮ್ಮೆ ಗೊಂದಲವಾಗಿದೆ. ಏನಾದರಾಗಲಿ, ಇಂಥ ಕಾಡುವ ನೆನಪಿನಿಂದ ಬಿಡುಗಡೆ ಪಡೆಯುವ ವಿಧಾನವೋ ಎಂಬಂತೆ ಈ ಬರಹಕ್ಕೆ ಕೈಹಚ್ಚಿದ್ದೇನೆ.

★★★

1981ನೆಯ ಇಸವಿ ಏಪ್ರಿಲ್ ತಿಂಗಳು ಇರಬೇಕು – ಆಗ ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ ಓದುತ್ತಿದ್ದ ನಾನು ಮೂವರು ಸಹಪಾಠಿಗಳೊಂದಿಗೆ ಮೂರು ವಾರಗಳ ಕೇರಳ ಪ್ರವಾಸಕ್ಕೆ ಹೊರಟಿದ್ದೆ. ಕೈಯಲ್ಲಿ ತುಂಬ ಹಣ ಇರಲಿಲ್ಲವಾದರೂ ನಮಗೆಲ್ಲರಿಗೂ ಏನನ್ನೂ ಎದುರಿಸುವ ಧೈರ್ಯ ಯಥೇಚ್ಛವಾಗಿ ಇತ್ತು; ಕೇರಳದ ಸಾಂಪ್ರದಾಯಿಕ ರಂಗಪ್ರಕಾರಗಳ ಬಗ್ಗೆ

